ಭೊಜನರಸ ವಿಭಾವ ಸಂಧಿ

ಹರಿಕಥಾಮ್ರಿತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು

ವನಜಜಾಂಡದೊಳುಳ್ಳಖಿಳ ಚೇ
ತನರು ಭುಂಜಿಪ ಚತುರವಿಧ ಭೋ
ಜನಪದಾಥದಿ ಚತುರ ವಿಧ ರಸರೂಪ ತಾನಾಗಿ
ಮನಕೆ ಬಂದುದನುಂಡುಣಿಸಿ ಸಂ
ಹನನಕುಪಚಯ ಕರಣಕಾನಂ
ದನಿಮಿಷರಿಗಾತ್ಮಪ್ರದೆಹನ ಸುಖವನೀವ ಹರಿ ೪-೧

ನೀಡದಂದದಲಿಪ್ಪ ಲಿಂಗಕೆ
ಷೋಡಶಾತ್ಮಕ ರಸವಿಭಾಗವ
ಮಾಡಿ ಷೋಡಶಕಲೆಗಳಿಗೆ ಉಪಚಯಗಳನೆ ಕೊಡುತ
ಕ್ರೋಡ ಎಪ್ಪತ್ತೆರಡು ಸಾವಿರ
ನಾಡಿಗತದೇವತೆಗಳೊಳಗಿ
ದ್ದಾಡುತಾನಂದಾತ್ಮ ಚರಿಸುವ ಲೋಕದೊಳು ತಾನು ೪-೨

ದ್ದಾರುರಸವೆಂದೆನಿಸಿ ಮೂವ
ತ್ತಾರು ಸಾವಿರ ಸ್ತ್ರೀ ಪುರುಷ ನಾಡಿಯಳು ತದ್ರುಪ
ಧಾರಕನು ತಾನಾಗಿ ಸರ್ವಶ
ರೀರಗಳಲಿ ಅಹಶ್ಚರಾತ್ರಿ ವಿ
ಹಾರಮಾಳ್ಪನು ಬ್ಇಉಹತಿಯೆಂಬ ಸುನಾಮದಿಂ ಕರೆಸಿ ೪-೩

ಆರುರಸ ಸತ್ವಾದಿ ಭೇದದಿ
ಆರು ಮೂರಾಗಿಹವು ಸರಾ
ಸಾರ ನೀತಾಪ್ರಚುರ ಖಂಡಾಖಂಡ ಚಿತ್ಪ್ರಚುರ
ಈರಧಿಕ ಎಪ್ಪತ್ತುಸಾವಿರ
ಮಾರಮಣನ ರಸಾಖ್ಯರೂಪ ಶ
ರೀರದಲಿ ಭೋಜ್ಯ ಸುಪದಾಥದಿ ತಿಳಿದು ಭುಂಜಿಸುವುದು ೪-೪

ಈರಗತ ರಸರೂಪಗಳು ಮು
ನ್ನೂರು ಮ್ಯಾಲೈವತ್ತು ನಾಲಕು
ಚಾರು ಘ್ಇತಗತ ರೂಪಗಳು ಇಪ್ಪತ್ತರೋಂಭತ್ತು
ಸಾರ ಗುಡದೊಳಗೈದು ಸಾವಿರ
ನೂರವೊಂದು ಸುರೂಪ ದ್ವಿಸಹ
ಸ್ರಾರೆರಡು ಶತ ಪಂಚವಿಂಶತಿ ರೂಪ ಫಲಗಳಲಿ ೪-೫

ವಿಶದ ಸ್ಥಿರ ತೀಣವು ನಿರಹರ
ರಸದೊಳು ಮೂರ್ರೈದು ಸಾವಿರ
ತ್ರಿಶತನವ ರೂಪಗಳ ಚಿಂತಿಸಿ, ಭುಂಜಿಪುದು ವಿಷಯ
ಶ್ವಸನ ತತ್ವೇಶರೊಳಗಿದ್ದೀ
ಪೆಸರಿನಿಂದಲಿ ಕರೆಸುವನು ಧೇ
ನಿಸಿದರೀ ಪರಿ ಮನಕೆ ಪೊಳೆವನು ಬಲ್ಲ ವಿಬುಧರಿಗೆ ೪-೬

ಕಪಿಲ ನರಹರಿ ಭಾಗವತ್ರಯ
ವಪುಷ ನೇತ್ರದಿ ನಾಸಿಕಾಸ್ಯದಿ
ಶಫರನಾಮಕ ಜಿವ್ಹೆಯಲಿ ದಂತದಲಿ ಹಂಸಾಖ್ಯ
ತ್ರಿಪದಿಪಾದ್ಯ ಹಯಾಸ್ಯ ವಾಚ್ಯದೊ
ಳಪರಿಮಿತ ಸುಖಪುಣ ಸಂತತ
ಕ್ಇಪಣರೊಳಗಿದ್ದವರವರ ರಸ ಸ್ವೀಕರಿಸಿ ಕೊಡುವ ೪-೭

ನಿರುಪಮಾನಮ್ಹಾತ್ಮ ಹರಿ ಸಂ
ಕರುಷಣ ಪ್ರದ್ಯುಮ್ನ ರೂಪದಿ
ಇರುತಿಹನು ಭೋಕ್ತ್ಇಗಳೊಳಗೆ ತಚ್ಛಕ್ತಿದನು ಯೆನಿಸಿ
ಕರೆಸುವನು ನಾರಾಯಣನಿರು
ದ್ಧೆರಡು ನಾಮದಿ ಭೊಜ್ಯ ವಸ್ತುಗ
ನಿರುತ ತಪಕನಾಗಿ ತ್ಇಉಪ್ತಿಯನೀವ ಚೇತನಕೆ ೪-೮

ವಾಸುದೇವನು ಒಳಹೊರಗೆ ಅವ
ಕಾಶ ಕೊಡುವ ನಭಸ್ಥನಾಗಿ ರ
ಮಾಸಮೇತ ವಿಹಾರ ಮಾಳ್ಪನು ಪಂಚರೂಪದಲಿ
ಆ ಸರೋರುಹ ಸಂಭವಾ ಭವ
ವಾಸವಾದ್ಯಮರಾದಿ ಚೇತನ
ರಾಶಿಯೊಳಗಿಹನೆಂದು ಅರಿತವನವನೆ ಕೋವಿದನು ೪-೯

ವಾಸುದೇವನು ಅನ್ನದೊಳು ನಾ
ನಾ ಸುಭಯದಿ ಸಂಕರುಷಣ ಕ್ಇ
ತೀಶ ಪರಮಾನ್ನದೊಳು ಘ್ಇತದೊಳಗಿಪ್ಪನನಿರುದ್ಧ
ಆ ಸುಪಣಾಂಸಗನು ಸೂಪದಿ
ವಾಸವಾನುಜ ಶಾಕದೊಳು ಮೂ
ಲೇಶ ನಾರಾಯಣನು ಸವತ್ರದಲಿ ನೆಲೆಸಿಹನು ೪-೧೦

ಅಗಣಿತಾತ್ಮ ಸುಭೋಜನ ಪದಾ
ಥಗಳ ಒಳಗೆ ಅಖಂಡವಾದೊಂ
ದಗಳಿನೊಳನಂತಾಂಶದಿಂದಲಿ ಖಂಡನೆಂದಿನಿಸಿ
ಜಗದಿ ಜೀವರ ತ್ಇಪ್ತಿ ಪಡಿಸುವ
ಸ್ವಗತ ಭೇದವಿವಜಿತನ ಈ

ಬಗೆಯ ರೂಪವನರಿತು ಭುಂಜಿಸಿ ಅಪಿಸುವನಡಿಗೆ ೪-೧೧

ಈ ಪರಿಯಲರಿತುಂಬ ನರ ನಿ
ತ್ಯೋಪವಾಸಿ ನಿರಾಮಯನು ನಿ
ಷ್ಪಾಪಿ ನಿತ್ಯ ಮಹತ್ಸುಯಜ್~ನಾಗಳಾಚರಿಸಿದವನು
ಪೋಪುದಿಪ್ಪುದು ಬಪ್ಪುದೆಲ್ಲ ರ
ಮಾಪತಿಗಧಿಶ್ಠಾನವೆನ್ನ ಕ್ಇ
ಪಾಪಯೋನಿಧಿ ಮಾತನಾಲಿಸುತಿಹ ಜನನಿಯಂತೆ ೪-೧೨

ಆರೆರದು ಸಾವಿರಧ ಮೇಲಿನ್ನೊರ ಐವಥ್ಥೊಮ್ದು ರೂಪಧಿ
ಸಾರಭೋಕ್ಥನಿರುಧ್ಧ ಧೇವನು ಅನ್ನಮಯನೆನಿಪ
ಮೂರೆರದುವರೆ ಸಾವಿರಧ ಮೇಲ್ ಮೂರಧಿಕ ನಾಲ್ವಥ್ಥು ರೂಪಧಿ
ಥೋರುಥಿಹ ಪ್ರಧ್ಯುಮ್ನ ಜಗಧೊಳು ಪ್ರಾಣಮಯನಾಗಿ ೪-೧೩

ಎರದು ಕೋಶದ ಒಳಹೊರಗೆ ಸಂ
ಕರುಷಣೈದು ಸುಲಅದರವ
ತ್ತೆರಡು ಸಾವಿರದೇಳಧಿಕ ಶತರೂಪಗಳ ಧರಿಸಿ
ಕರೆಸಿಕೊಂಬ ಮನೋಮಯನು ಎಂ
ದರವಿದೂರನು ಈರೆರಡು ಸಾ
ವಿರದ ಮುನ್ನೊರಾದ ಮೇಲ್ನಾಲ್ಕಧಿಕ ಎಪ್ಪತ್ತು ೪-೧೪

ರೂಪದಿಂ ವಿಜ್~ನಾನ ಮಯನೆಂಬ್
ಈ ಪೆಸರಿನಿಂ ಆಸುದೇವನು
ವ್ಯಾಪಿಸಿಹ ಮಹದಾದಿ ತತ್ವವ ತತ್ಪತಿಗಳೋಳಗೆ
ಈ ಪುರುಷನಾಮಕನ ಶುಭಸ್ವೇ
ದಾಪಳೆನಿಸಿ ರಮಾಂಬ ತಾ ಬ್ರ
ಹ್ಮಾಪರೋಇಗಳಾದವರ ಲಿಂಗಾಂಗ ಕೆಡಿಸುವಳು ೪-೧೫

ಐದುಸಾವಿರ ನೂರ ಇಪ್ಪ
ತ್ತೈದು ನಾರಾಯಣನ ರೂಪವ
ತಾ ಧರಿಸಿಕೊಂಡನುದಿನದಿ ಆನಂದಮಯನೆನಿಪ
ಐದು ಲಅದ ಮೇಲೆ ಎಂಭ
ತ್ತೈದು ಸಾವಿರ ನಾಲ್ಕು ಶತಗಳ
ಐದು ಕೋಶಾತ್ಮಕ ವಿರಿಂಚಾಂಡದೋಳು ತುಂಬಿಹನು ೪-೧೬

ನೂರವೊಂದು ಸುರೂಪದಿಂ ಶಾಂ
ತೀರಮಣ ತಾನನ್ನನೆನಿಪ್ಪೈ
ನೂರ ಮೇಲ್ಮೂರಧಿಕದಶ ಪ್ರಾಣಾಖ್ಯ ಪ್ರದ್ಯುಮ್ನ
ತೋರುತಿಹನೈವತ್ತೈದು ವಿ
ಕಾರ ಮನದೊಳು ಸಂಕರುಷಣೈ

ನೂರು ಚತುರಾಶೀತಿ ವಿಜ್~ನಾನಾತ್ಮ ವಿಶ್ವಾಖ್ಯ ೪-೧೭

ಮೂರು ಸಾವಿರದಧಶತ ಮೇ
ಲೀರಧಿಕರೂಪಗಳ ಧರಿಸಿ ಶ
ರೀರದೊಳಗಾನಂದಮಯ ನಾರಾಯಣಾಹ್ವಯನು
ಈರೆರಡು ಸಾವಿರದ ಮೇಲ್ಮು
ನ್ನೂರು ಐದು ಸುರೂಪದಿಂದಲಿ
ಭಾರತೀಶನೋಳಿಪ್ಪ ನವನೀತಸ್ಥ ಘೃತದಂತೆ ೪-೧೮

ಮೂರಧಿಕ ಐವತ್ತು ಪ್ರಾಣ ಶ
ರೀರದೊಳಗನಿರುದ್ಧನಿಪ್ಪೈ
ನೂರು ಹನ್ನೊಂದಧಿಕಪಾನನೊಳಿಪ್ಪೈ ಪ್ರದ್ಯುಮ್ನ
ಮೂರನೆಯ ವ್ಯಾನನೋಳಗ್ಗೈದರೆ
ನೂರು ರೂಪದಿ ಸಂಕರುಷಣೈ
ನೂರು ಮೂವತ್ತೈ ದುದಾನನೋಳಿಪ್ಪ ಮಾಯೇಶ ೪-೧೯

ಮೂಲನಾರಾಯಣನು ಐವ
ತ್ತೇಳಧಿಕ ಐನೂರು ರೂಪವ
ತಾಳಿ ಸವತ್ರದಿ ಸಮಾನನೋಳಿಪ್ಪ ಸವೇಶ
ಲೀಲೆಗೈವನು ಸಾವಿರದ ಮೇ

ಲೇಳು ನೂಹನ್ನೊಂದು ರೂಪವ
ತಾಳಿ ಪಂಚಪ್ರಾಣರೊಳು ಲೋಕಗಳ ಸಲಹುವನು ೪-೧೦

ತ್ರಿನವತಿ ಸ್ವರೂಪಾತ್ಮಕನಿರು
ದ್ಧನು ಸದಾ ಯಜಮಾನನಾಗಿ
ದ್ದನಲ ಯಮ ಸೋಮಾದಿ ಪಿತ್ಇದೇವತೇಗಳಿಗೆ ಅನ್ನ
ನೆನಿಪನಾ ಪ್ರದ್ಯುಮ್ನ ಸಂಕರು
ಷಣ ವಿಭಾಗವ ಮಾಡಿಕೊಂ
ಡುಣಿಪ ನಿತ್ಯಾನಂದ ಭೋಜನದಾಯಿ ತುಯಾಹ್ವ ೪-೧೧

ಷಣ್ಣವತಿನಾಮಕನು ವಸು ಮೂ
ಕ್ಕಣ್ಣ ಭಾಸ್ಕರರೊಳಗೆ ನಿಂತು ಪ್ರ
ಪನ್ನ ರನುದಿನ ನಿಷ್ಕಪಟ ಸದ್ಭಕ್ತಿಯಲಿ ಮಾಳ್ಪ
ಪುಣ್ಯ ಕಮವ ಸ್ವೀಕರಿಸಿ ಕಾ
ರುಣ್ಯ ಸಾಗರನಾ ಪಿತ್ಇಗಳಿಗೆ
ಗಣ್ಯ ಸುಖವಿತ್ತವರ ಪೊರೆವನು ಎಲ್ಲ ಕಾಲದಲಿ ೪-೧೨

ಸುತಪನೇಕೋತ್ತರ ಸುಪಂಚಾ
ಶತವರಣ ಕರಣದಿ ಚತುವಿಂ
ಶತಿ ಸುತತ್ವದಿ ಧಾತುಗಳೊಳಗಿದ್ದವಿರತನಿರುದ್ಧ

ಜತನ ಮಾಳ್ಪನು ಜಗದಿ ಜೀವ
ಪ್ರತತಿಗಳ ಷಣ್ಣವತಿ ನಾಮಕ
ಚತುರ ಮೂತಿಗಳಚಿಸುವರದರಿಂದೆ ಬಲ್ಲವರು ೪-೧೨

ಅಂಬುಜಜಾಂಡೋದರನು ವಿಪಿನದಿ
ಶಬರಿಯೆಂಜಲನುಂಡು ಗೋಕುಲ
ದಬಲೆಯರನೊಲಿಸಿದನು ಇಷಿ ಪತ್ನಿಯರು ಕೊಟ್ಟನ್ನ
ಸುಭುಜ ತಾ ಭುಂಜಿಸಿದ ಸ್ವರಮಣ
ಕುಬುಜೆ ಗಂಧಕೆ ಒಲಿದ ಮುನಿಗಣ
ವಿಬುಧಸೇವಿತ ಬಿಡುವನೇ ನಾವಿತ್ತ ಕಮಫಲ ೪-೧೪

ಗಣನೆಯಿಲ್ಲದ ಪರಮಸುಖ ಸ
ದ್ಗುಣಗಣಂಗಳ ಲೇಶಲೇಶಕೆ
ಎಣೆಯೆನಿಸದು ರಮಾಬ್ಜ ಭವಶಕ್ರಾದಿಗಳ ಸುಖವು
ಉಣುತುಣುತಮ್ಮೆ ಮರೆದು ಕ್ಇಷ್ಣಾ
ಪಣವೆನಲು ಕೈಕೊಂಬನಭಕ
ಜನನಿ ಭೋಜನ ಸಮಯದಲಿ ಕೈಯೊಡ್ಡುವಂದದಲಿ ೪-೧೫

ಜೀವ ಕ್ಇತ ಕಮಗಳ ಬಿಡದೆ ರ
ಮಾವರನು ಸ್ಈಕರಿಸಿ ಫಲಗಳ

ನೀವನಧಿಕಾರಾನುಸಾರದಲವರಿಗನವರತ
ಪಾವಕನು ಸವಸ್ವ ಭುಂಜಿಸಿ
ತಾ ವಿಕಾರವನೈದನೊಮ್ಮೆಗು
ಪಾವಕನೆ ಪಾವನನೆನಿಪ ಹರಿಯುಂಬುದೇನರಿದು ೪-೧೬

ಕಲುಷ ಜಿಹ್ವೆಗೆ ಸುಷ್ಟುಭೋಜನ
ಜಲ ಮೊದಲು ವಿಷದೋರುವುದು ನಿ
ಷ್ಕಲುಷ ಜಿಹ್ವೆಗೆ ಸುರಸ ತೋರುವುದೆಲ್ಲ ಕಾಲದಲಿ
ಸುಲಲಿತಾಂಗಗೆ ಸಕಲರಸ ಮಂ
ಗಳವೆನಿಸುತಿಹುದನ್ನಮಯ ಕೈ
ಕೊಳದೆ ಬಿಡುವನೆ ಪೂತನಿಯ ವಿಷಮೊಲೆಯನುಂಡವನು ೪-೧೭

ಪೇಳಲೇನು ಸಮೀರದೇವನು
ಕಾಲಕೂಟವನುಂಡು ಲೋಕವ
ಪಾಲಿಸಿದ ತದ್ದಾಸನೋವನು ಅಮ್ಇಉತನೆನಿಸಿದನು
ಶ್ರೀ ಲಕುಮಿವಲ್ಲಭ ಶುಭಾಶುಭ
ಜಾಲಕಮಗಳುಂಬನುಪಚಯ
ದೆದೇಳಿಗೆಗಳವಗಿಲ್ಲವೆಂದಿಗು ಸ್ವರಸಗಳ ಬಿಟ್ಟು ೪-೧೮

ಈ ಪರಿಯಲಚ್ಯುತನ ತತ್ತ

ದ್ರೂಪ ತನ್ನಾಮಗಳ ಸಲೆ ನಾ
ನಾ ಪದಾಥದಿ ನೆನೆನೆನೆದು ಭುಂಜಿಸುತಲಿರು ವಿಷಯ
ಪ್ರಾಪಕ ಸ್ಥಾಪಕ ನಿಯಾಮಕ
ವ್ಯಾಪಕನುಯೆಂದರಿದು ನೀ ನಿ
ಲೇಪನಾಗಿರು ಪುಣ್ಯ ಪಾಪಗಳನಪಿಸವನಡಿಗೆ ೪-೧೯

ಐದು ಲಎಂಭತ್ತರೊಂಭ
ತ್ತಾದ ಸಾವಿರದೇಳುನೂರರ
ಐದು ರೂಪವ ಧರಿಸಿ ಭೋಕ್ತ್ಇಗ ಭೋಜ್ಯನೆಂದೆನಿಸಿ
ಶ್ರೀಧರಾ ದುಗಾರಮಣ ಪಾ
ದಾದಿ ಶಿರಪಯಂತ ವ್ಯಾಪಿಸಿ
ಕಾದುಕೊಂಡಿಹ ಸಂತತ ಜಗನ್ನಾಥ ವಿಟ್ಠಲನು ೪-೨೦